ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಆ ಪ್ರದೇಶದಲ್ಲಿ 500 ಯೂನಿಟ್ ನೀರನ್ನೂ ನಿಲ್ಲಲು ಸಾಧ್ಯವಿದೆ, ಅಷ್ಟು ನೀರಿನ ನರಬರಾಯಿ ಇರುತ್ತೆಂದು ಅಂದಾಜು ತಯಾರಿಸಿ ತಮಗೆ ಬಂದಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ 500 ಯೂನಿಟ್ ನೀರನ್ನು ತಡೆಯತಕ್ಕ ಪ್ರಶ್ನೆಯೇ ಇಲ್ಲ. ಆ ನದಿಯಲ್ಲಿ ಅಷ್ಟು ಯೂನಿಟ್ ನೀರು ನರಬರಾಯಿ ಕೂಡ ಆಗುವುದಿಲ್ಲವೆಂದು ವರದಿ ಬಂದಿದೆ.

ಶ್ರೀ ಮುದ್ದುರಾಮಯ್ಯ.—ಅಲ್ಲಿ ಆ ಒಂದು ಅಣೆಕಟ್ಟು ಹಾಕುವುದರಿಂದ ನುಮಾರು 15 ಕೆರೆಗಳಿಗೆ ನೀರು ನರಬರಾಯಿ ಆಗುತ್ತದೆ ಎನ್ನುವ ವಿಚಾರ ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರೊಂದಿದ್ದರೆ ಎಷ್ಟು ಕೆರೆಗಳಿಗೆ ಬೇಕಾದರೂ ಅನುಕೂಲವಾಗುತ್ತದೆ. ಆದರೆ ಅಂಥ ಅನುಕೂಲ ಕಲ್ಪಿಸಲು ಆ ನದಿಯಲ್ಲಿ ನೀರೇ ಇಲ್ಲ.

ಶ್ರೀ ಮುದ್ದುರಾಮಯ್ಯ.—ಈ ನದಿಯಲ್ಲಿ ಮಳೆಗಾಲದಲ್ಲಿ ಮೂರು ನಾಲ್ಕು ತಿಂಗಳು ವಿಶೇಷ ಪ್ರವಾಹ ವಿರುತ್ತದೆ ಎಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು. ನೀರೇನೋ ಬರುತ್ತದೆ. ಕೊನೆಯ ಕೆರೆಯ ಹತ್ತಿರಕ್ಕೆ ನಾವು ಈ ನೀರನ್ನು ತೆಗೆದುಕೊಂಡು ಹೋಗುವ ವೇಳೆಗೆ ಆ ಕೆರೆಗೆ ಎಷ್ಟು ನೀರಿನ ಪ್ರಮಾಣದ ಅವಶ್ಯಕತೆ ಇರುತ್ತದೆಯೋ ಅಷ್ಟು ಪ್ರಮಾಣದ ನೀರು ದೊರೆಯುವುದಿಲ್ಲ.

ಶ್ರೀ ಮುದ್ದುರಾಮಯ್ಯ.—ತಾವು ಇನ್ನೊಮ್ಮೆ ಈ ವಿಚಾರವನ್ನು ಪರಿಶೀಲನೆ ಮಾಡಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಮಾಡಿಸಿರತಕ್ಕ ಪರಿಶೀಲನೆಗಳೇ ಸಾಕು. ಮತ್ತೊಮ್ಮೆ ಮಾಡಿಸಬೇಕೆಂದು ತಾವು ಅಪೇಕ್ಷಿಸುವುದಾದರೆ ಅದನ್ನೂ ಮಾಡೋಣ.

Pick-up near Siddeswaraswamy Temple, Motaganahally, Magadi Taluk.

Q.—608. Sri S. SIDDAPPA (Magadi).—

Will the Government be pleased to state :—

whether estimates have been prepared for the construction of a pick-up near Siddeswaraswmy Temple, Motaganahally, Magadi Taluk?

A.—Sri H. M. CHANNABASAPPA (Minister for Industries).—

An estimate is under preparation.

ಶ್ರೀ ಎಸ್. ಸಿದ್ದಪ್ಪ.—ಅಂದಾಜು ತಯಾರಾಗಿದೆ ಎಂದು ಅಪ್ಪಣೆ ಕೊಡಿಸಲಾಗಿದೆ. ಎಷ್ಟು ದಿವಸಗಳಲ್ಲಿ ಈ ನಾರೆಯ ಕೆಲಸ ಕಾರ್ಯರೂಪಕ್ಕೆ ಬರುತ್ತದೆ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಆ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಸಿದ್ದಪ್ಪ.—ಇದಕ್ಕೆ ಎಷ್ಟಕ್ಕೆ ಅಂದಾಜಾಗಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅರವತ್ತು ಸಾವಿರ ರೂಪಾಯಿಗಳಿಗೆ ಅಂದಾಜಾಗಿದೆ.

ಶ್ರೀ ಎಸ್. ಸಿದ್ದಪ್ಪ.—ಅಚ್ಚುಕಟ್ಟು ಎಷ್ಟು?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೂರು ಎಕರೆಗಳು.

Honnemaradu Project (Compensation for submerged lands).

Q.—380. Sri S. GOPALA GOWDA (Sagar-Hosanagar).—

Will the Government be pleased to state :—

(*a*) the extent of agricultural land that will be submerged after the completion of the Sharavathi Valley Hydel Project (Honnemaradu) (details of garden, wet and dry may be given);

(*b*) the number of persons who will be affected [details of persons (i) landed, (ii) landless may be given];

(*c*) the steps proposed to be taken to rehabilitate them;

(*d*) whether the Government would consider the question of providing land and other facilities along with compensation for submerged properties in advance to the affected persons?

A—Sri H. M. CHANNABASAPPA (Minister for Industries).—

(*a*) 19,500 acres.

Details are as below :—

Dry	...	2,500 acres
Wet	...	15,000 acres
Garden	...	2,000 acres

(*b*) Details will only be available after contour surveys, now in progress, are completed.

(*c*) It is proposed to provide land and building sites and other facilities on the usual scale to the displaced persons. Sanction has been accorded to the appointment of a Land Acquisition and Rehabilitation Officer with necessary staff.

(*d*) Yes.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರದವರು ಈ ಮುಳುಗಡೆ ಆದುದರ ಸಂಬಂಧವಾಗಿ ಪರಿಹಾರ ಕೊಡತಕ್ಕ ಬಗ್ಗೆ ಯಾವ ನೀತಿಯನ್ನು ಅನುಸರಿಸಿ ಕೊಡುತ್ತಿದ್ದೀರಿ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಕಾನೂನು ಬದ್ಧವಾಗಿ ಏನೇನು ಪರಿಹಾರ ನೀಡಬೇಕೆಂದಿರುತ್ತದೆಯೋ ಅದರ ಪ್ರಕಾರ ಪರಿಹಾರವನ್ನು ನೀಡುತ್ತಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಆ ಕಾನೂನಿನಲ್ಲಿ ಯಾವ ರೀತಿ ಇದೆ ಎಂಬುದನ್ನು ತಿಳಿಸುವಿರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ರೀತಿ ಕಾನೂನಿನಲ್ಲಿ ಹೇಳಿದೆ ಎಂಬುದನ್ನು ತಾವೇ ಓದಿ ಕೊಳ್ಳಬಹುದು.

ಶ್ರೀ ಎಸ್. ಗೋಪಾಲಗೌಡ.—ಈಗ ತಾವು ಕೊಡುತ್ತಿರುವ ಪರಿಹಾರದ ಪ್ರಮಾಣ ಅವರಿಗೆ ಬೇರೆ ಕಡೆಗಳಲ್ಲಿ ಜಮೀನು ಇತ್ಯಾದಿಗಳನ್ನು ಮಾಡಿಕೊಳ್ಳಲು ಎಷ್ಟು ಹಣ ಬೇಕಾಗಿರುತ್ತದೆಯೋ ಅಷ್ಟನ್ನು ಒದಗಿಸುವುದಕ್ಕೆ ಏರ್ಪಾಡೇನಾದರೂ ಮಾಡಲಾಗಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಾನೂನು ರೀತ್ಯಾ ಕೊಡಲಾಗುತ್ತಿದೆ. ಆದರೆ ಈ ಸಂಬಂಧವಾಗಿ ಒಂದು ಬೇರೆ ಸಮಿತಿಯನ್ನೇ ನೇಮಕ ಮಾಡಲಾಗಿದೆ. ಆ ಸಮಿತಿಯವರು ಆಯಾ ಗ್ರಾಮದಲ್ಲಿ ಜನರ ಕಷ್ಟ ಸುಖಗಳೇನೆಂಬುದನ್ನು ಕೂಡ ತಿಳಿದುಕೊಂಡು ಅದರ ಪ್ರಕಾರ ಅವರಿಗೆ ಸಹಾಯವನ್ನೊದಗಿಸಬೇಕೆಂಬ ವಿಚಾರ ಕೂಡ ಈಗ ಸರ್ಕಾರದವರ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ಈಗ ಆ ಸಮಿತಿಯವರು ಆಯಾ ಗ್ರಾಮಗಳ ಜನರ ಕುಂದುಕೊರತೆಗಳೇನಿರುತ್ತವೆ ಎಂಬುದನ್ನು ಪರೀಶಿಲನೆ ಮಾಡುತ್ತಿದ್ದಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಅದಕ್ಕೆಲ್ಲ ತಕ್ಕ ಸಿಬ್ಬಂದಿಯನ್ನು ಏರ್ಪಾಡು ಮಾಡಿದ್ದೇವೆ. ಈಗ ಅವರು ಕೆಲಸವನ್ನು ಪ್ರಾರಂಭಿಸುವುದರಲ್ಲಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಇನ್ನು ಮುಂದಕ್ಕೆ ಈ ರೀತಿ ಭಾರಿ ಪ್ರಮಾಣದಲ್ಲಿ ಮುಳುಗಡೆ ಆಗತಕ್ಕ ದ್ದನ್ನು ತಪ್ಪಿಸುವ ಸಲುವಾಗಿ ನಣ್ಣ ನಣ್ಣ ಪ್ರಾಜೆಕ್ಟು ಗಳನ್ನೇ ಕೈಗೊಳ್ಳಬೇಕೆಂಬುದಾಗಿ ಜನರು ಈ ಸರ್ಕಾರದವರ ಮತ್ತು ಕೇಂದ್ರಸರ್ಕಾರದವರ ಮುಂದೆ ಮಾಡಿಕೊಂಡಿರತಕ್ಕ ಮನವಿಗಳು ತಮ್ಮ ಅವಗಾಹನೆಗೆ ಬಂದಿರುತ್ತವೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಂದಿವೆ.

ಶ್ರೀ ಎಸ್. ಗೋಪಾಲಗೌಡ.—ಅವುಗಳನ್ನು ತಾವು ಪರಿಶೀಲನೆಮಾಡೋಣವಾಗಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಲಾಗಿದೆ. ಬೇರೆ ಯಾವ ಪ್ರಾಜೆಕ್ಟುಗಳೂ ಇಷ್ಟು ಕಮ್ಮಿ ಬೆಲೆಯಲ್ಲಿ ಆಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈ ಒಂದು ಕಾರಣ ದಿಂದಲೇ ಇಂಥ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕೈಗೊಳ್ಳಬೇಕೆಂದು ತೀರ್ಮಾನಮಾಡಿದ್ದೀರೋ ಅಥವಾ ಇದಕ್ಕೆ ಮತ್ತೆ ಯಾವ ಕಾರಣಗಳಾದರೂ ಇವೆಯೋ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದೊಂದೇ ಕಾರಣವಲ್ಲ. ಇನ್ನೂ ಅನೇಕ ಕಾರಣಗಳಿರುತ್ತವೆ. ಇಂಥ ಯೋಜನೆಯಿಂದ ಕಡಮೆ ವೆಚ್ಚದಲ್ಲಿ ಸರ್ಕಾರಕ್ಕೆ ಹೆಚ್ಚು ವರಮಾನ ಬರುತ್ತದೆ ಎಂಬುದನ್ನು ತಿಳಿದು ಈ ಯೋಜನೆಗಳಿಗೆ ಅನುಮೋದನೆ ಕೊಟ್ಟಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಭೂಮಿ ಇತ್ಯಾದಿ ಏನೂ ಮುಳುಗಡೆ ಆಗದೆ ಇರತಕ್ಕಂಥ ಜನರಿಗೆ ಸರ್ಕಾರದವರು ಈ ಪರಿಹಾರವನ್ನು ಯಾವ ರೀತಿ ಕೊಡಲು ಆಲೋಚನೆ ಮಾಡಿದ್ದೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೇಕೆ ಪರಿಹಾರ ಕೊಡಬೇಕು ಎನ್ನುವುದು ನನಗೆ ಅರ್ಥವಾಗುತ್ತಿಲ್ಲವಲ್ಲ!

ಶ್ರೀ ಎಸ್. ಗೋಪಾಲಗೌಡ.—ಈ ದಿವಸ ಆ ಮುಳುಗಡೆಯಾಗತಕ್ಕ ಪ್ರಾಂತ್ಯದಲ್ಲಿ ದೊಡ್ಡ ದೊಡ್ಡ ತೋಟಗಳಲ್ಲಿ ಮತ್ತು ಎಸ್ಟೇಟುಗಳಲ್ಲಿ ಕೆಲಸಮಾಡುತ್ತಿದ್ದಂಥ ಅನೇಕ ಜನರು ಈ ಮುಳುಗಡೆಯಿಂದ ಜೀವನಕ್ಕೆಲ್ಲದೆ ನಿರಾಶ್ರಿತರಾಗುತ್ತಿದ್ದಾರೆ. ಇಂಥವರ ವಿಚಾರವಾಗಿ ಸರ್ಕಾರ ಯಾವ ರೀತಿಯಲ್ಲಾದರೂ ಪರಿಹಾರ ನೀಡಲು ಆಲೋಚನೆ ಮಾಡಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಚಾರವನ್ನು ಕೂಡ ಈಗ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಈಗತಾನೆ ಮಾನ್ಯ ಮಂತ್ರಿಗಳು ಅವರಿಗೇಕೆ ಈ ಪರಿಹಾರ ನೀಡಬೇಕೆಂದು ಒಂದು ಅನುಮಾನ ಸೂಚಿಸಿ ಈಗ ಮತ್ತೆ ಆ ನಿರಾಶ್ರಿತರ ವಿಚಾರ ಕೂಡ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಿದ್ದಾರೆ!

Sri H. M. CHANNABASAPPA.—I have answered that point. All aspects including the question of those who have no land and who are depending on the land-lord will be taken into consideration by the Committee proposed to be appointed.

ಶ್ರೀ ಎಸ್. ಗೋಪಾಲಗೌಡ.—ಕೊನೆಯ ಪ್ರಶ್ನೆಗೆ, ಮುಳುಗಡೆಯಾಗತಕ್ಕ ಭೂಮಿ, ಮನೆಗಳಿಗೆಲ್ಲಾ ಮುಳುಗಡೆಯಾಗುವ ಮುಂಚೆಯೇ ಪರಿಹಾರ ಕೊಡುವುದನ್ನು ಯೋಚನೆಮಾಡುತ್ತೀರಾ ಎಂದು ಕೇಳಿದ್ದಕ್ಕೆ, ಪರ್ಯಾಲೋಚನೆ ಮಾಡಲಾಗುವುದು ಎಂದು ಹೇಳಿದ್ದೀರಿ. ಇದುವರೆಗೂ ಸರ್ಕಾರ ಅನುಸರಿಸುತ್ತಾ ಇರತಕ್ಕ ನೀತಿ, ಮುಳುಗಡೆಯಾದ ಸಂಧರ್ಭದಲ್ಲಿ ಅವರು ಕೇಳಿದ ಹಾಗೆ ಕೊಡುತ್ತಾ ಬಂದಿದ್ದಾರೆ. ಎರಡನೇ ಸ್ಟೇಜ್ ಇದರಲ್ಲಿರುವುದು, ಸರ್ವೇ ಆಗಿ ಎಷ್ಟು ಭೂಮಿ ಮುಳುಗಡೆಯಾಗುತ್ತದೆ ಎಂದು ಸರ್ವೆಯಲ್ಲಿ ಕಂಡುಬರುತ್ತದೆಯೋ ಅಷ್ಟು ಭೂಮಿಗೆ ಮೊದಲೇ ಪರಿಹಾರ ಕೊಡುವುದನ್ನು ಸರ್ಕಾರದವರು ಯೋಚನೆ ಮಾಡುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನೇ ಯೋಚನೆ ಮಾಡುತ್ತೇವೆ ಎಂದು ಹೇಳಲಾಗಿದೆ.

Sri Mulka GOVINDA REDDY.—What steps do Government propose to take to rehabilitate the landless labour there now?

Sri H. M. CHANNABASAPPA.—Even this question will be examined by the Committee proposed to be appointed by Government.

Sri Mulka GOVINDA REDDY.—Have the Government thought of any scheme in this connection?

Sri H M. CHANNABASAPPA.—Government will have to think of the scheme after getting the recommendations of the committee proposed to be appointed.

***Sri A. G. RAMACHANDRA RAO.**—One factor I wish to add. Government will extend a human approach to the problem, will take into consideration both those who lose property and those who have got to leave the place, and see that they are rehabilitated in the best manner possible..

Sri Mulka GOVINDA REDDY.— When will the Government appoint a committee to go into this question ?

Sri H. M. CHANNABASAPPA.—As early as possible.

Mysore Government Road Transport (Profits).

Q.—114. Sri G. A. THIMMAPPA GOWDA (Arkalgud).—

Will the Government be pleased to state :—

the profits that have been earned by the Mysore Government Road Transport Authority this year and how it compares with the previous three years ?

A.—Sri A. G. RAMACHANDRA RAO (Minister for Law and Education) [On behalf of SRI H. SIDDAVEERAPPA (Minister for Home).—

Rs. 15·06 lakhs during 1954-55.

The profits for the previous three years were as follows :—

		Rs.
1953-54	...	8,57,838
1952-53	...	25,729
1951-52	...	55,263

Sri G. A. THIMMAPPA GOWDA.—What is the income earned during 1955-56 ? You have given the income earned during 1951-52, 1952-53 and 1953-54. What is the income earned during 1955-56 ?

*Sri A. G. RAMACHANDRA RAO.—You are asking for the current year. It will expire within the next two days. Therefore we have not received any information about it.

Mr. SPEAKER.—Yes, accounts have to be obtained after the year closes.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇವೊತ್ತಿನವರೆಗೂ ಎಷ್ಟು ನಂಪಾದನೆಯಾಗಿದೆ ಎಂಬ ಲೆಕ್ಕ ಸರ್ಕಾರದಲ್ಲಿ ಇಲ್ಲವೇ ?

Sri A. G. RAMACHANDRA RAO.—This year means ? Probably up to the date of the notice of the question we could have given the figuers. You please put the next question and I will supply the information.

Sri Mulka GOVINDA REDDY.—What are the abnormal reasons for the abnormal low profits earned in 1951-52 and 1952-53 ?

Sri A. G. RAMACHANDRA RAO.—In 1952-53 and 1951-52 we were not running the buses on monopolistic basis. Now in 1953-54 we are running them on monopolistic basis. Therefore we got better returns.

Sri Mulka GOVINDA REDDY.—Is that the only reason for very low profits during 1951 and 1952 and 1952-53 when compared to 1953-54 ?

Sri A. G. RAMACHANDRA RAO.—That is one of the main reasons. The other reason is we have expanded since 1953-54 and this has added to the returns.

Sri Mulka GOVINDA REDDY—Have Government provided for sufficient depreciation in 1953-54 ?

Sri A. G. RAMACHANDRA RAO.—Yes.

ಶ್ರೀ ವಿ. ಆರ್. ನಾಯ್ಡು.—ಮೈಸೂರು ರೋಡ್ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟಿನ ಜನರಲ್ ಮ್ಯಾನೇಜರು ಯಾರು, ಅವರ ಹೆಸರೇನು ?

Sri A. G. RAMACHANDRA RAO:—Sir, one thing I have to correct. It is stated in the question 'Road Transport Authority'. It is not authority. But it is 'department'. It may be corrected.

As regards the answer to the question put, I believe the Hon'ble Member not only knows the present incumbent but also the previous incumbent.

ಶ್ರೀ ವಿ. ಆರ್. ನಾಯ್ಡು.—ಲಕ್ಷ್ಮಣರಾಯರು ಎಂಬವರು ತುಂಬ ದಕ್ಷರು ಎಂದು ನಾನು ಹೇಳತ್ತೇನೆ. ನೀವೇನು ಹೇಳುತ್ತೀರಿ, ಸ್ವಾಮಿ ?

(ನಭೆಯಲ್ಲಿ ನಗು).

(No answer.)

Canal from Jayamangali Tank to Itakadibbanahalli Hobli Tank.

Q.—100. Sri C. T. HANUMANTHAIYA (Pavagada—Scheduled Castes).—

Will the Government be pleased to state :—

(*a*) when the application was received requesting them to construct a canal from Jayamangali tank to Itakadibbanahalli Hobli tank in Madhugiri Taluk ;